ಡಾ. ನಾರಾಯಣ ಮೊಗಸಾಲೆ ಅವರ ಜನ್ಮಭೂಮಿ ಕಾಸರಗೋಡು ತಾಲ್ಲೂಕಿನ ಕೋಳ್ಯೂರು. ಕರ್ಮಭೂಮಿ ದಕ್ಷಿಣಕನ್ನಡದ ಕಾಂತಾವರ. ವೃತ್ತಿಯಲ್ಲಿ ಆಯುರ್ವೇದ ವೈದ್ಯರಾದ ಮೊಗಸಾಲೆ ಕವಿಯಾಗಿ, ಸಂಘಟಕರಾಗಿ ಪ್ರಸಿದ್ಧರು. ಅವರು ರೂಪಿಸಿದ ಕಾಂತಾವರ ಕನ್ನಡಸಂಘದ ಕಂಪು ನಾಡಿನಲ್ಲೆಲ್ಲ ಪಸರಿಸಿದೆ. 'ವರ್ತಮಾನದ ಮುಖಗಳು', 'ಪಲ್ಲವಿ', 'ಮೊಗಸಾಲೆಯ ನೆನಪುಗಳು', 'ಸ್ವಂತಕ್ಕೆ ಸ್ವಂತಾವತಾರ', 'ಇಹಪರದ ಕೊಳ', 'ಕಾಮನ ಬೆಡಗು', 'ದೇವರು ಮತ್ತೆ ಮತ್ತೆ' ಅವರ ಕೆಲವು ಕವನ ಸಂಕಲನಗಳು. 'ಮಣ್ಣಿನ ಮಕ್ಕಳು', 'ಕನಸಿನ ಬಳ್ಳಿ', 'ಪಲ್ಲಟ', 'ಅರ್ಥ', 'ಉಲ್ಲಂಘನೆ', 'ಮುಖಾಂತರ' ಪ್ರಮುಖ ಕಾದಂಬರಿಗಳು. 'ಹಸಿರುಬಿಸಿಲು', 'ಸುಂದರಿಯ ಎರಡನೇ ಅವತಾರ', 'ಸೀತಾಪುರದ ಕಥೆಗಳು', 'ಸನ್ನಿಧಿಯಲ್ಲಿ ಸೀತಾಪುರ' ಪ್ರಸಿದ್ಧ ಕಥಾ ಸಂಕಲನಗಳು.

ದೀಪದಂಥ ಜಾನಪದ ಕಥೆಗಳು ನನ್ನಲ್ಲಿ ಸಾಹಿತ್ಯ ಪ್ರೀತಿಯನ್ನು ಹುಟ್ಟುಹಾಕಿದವು. ಅದು ನನ್ನನ್ನು ಈ 'ತಬ್ಬಲಿತನ'ದಿಂದ ಕಾಪಾಡಿತಲ್ಲದೆ ನನ್ನಲ್ಲಿದ್ದ ಸೃಜನಶೀಲತೆಗೆ ಕಾವು ಕೊಟ್ಟಿತು.

**◆ ನೀವೇ ಒಂದೆಡೆ 'ನಾನು ಯಶಸ್ವಿ ವೈದ್ಯ ಅಂತ ಅನಿಸಿದ್ದರೆ, ಅದು ನನ್ನ ವೈದ್ಯಕೀಯ ಪ್ರಾವೀಣ್ಯದಿಂದ ಅಲ್ಲ; ಪ್ರಾಯಃ 'ಮಾತಿನಿಂದ' ಅಂತ ಹೇಳಿಕೊಂಡಿದ್ದೀರಿ. ನಿಮ್ಮ ವೈದ್ಯಕೀಯ ವೃತ್ತಿ ಮತ್ತು ಸಾಹಿತ್ಯ ಸಂಘಟನೆಯ ಕುರಿತು ಹೇಳಬಹುದಾದರೆ...**

ಈಗಲೂ 'ಯಶಸ್ವಿ ವೈದ್ಯ' ಎಂದು ಹೇಳಿಕೊಳ್ಳುವ ಧೈರ್ಯ ನನಗಿಲ್ಲ. ಯಾಕೆಂದರೆ ನಾನು ಈ ವೃತ್ತಿಗೆ ತೊಡಗಿದಾಗಲೇ ಅದರ 'ಯಶಸ್ಸು' ಅಂತ ಇದ್ದದ್ದು ಸಂಪಾದನೆಯಲ್ಲಿ! ದಿನವೊಂದಕ್ಕೆ ಎಷ್ಟು ರೋಗಿಗಳು ಬರುತ್ತಾರೆ ಮತ್ತು ಎಷ್ಟು ಮಂದಿಗೆ ಚಿಕಿತ್ಸೆ ನೀಡಿದಿರಿ? ಎಂಬ ನೆಲೆಯಲ್ಲಿ. ನನಗೆ ಆ ಭಾವನೆ ಅಂದಿನಿಂದ ಈ ತನಕವೂ ಇಲ್ಲ. ನನ್ನ ದೃಷ್ಟಿಯಲ್ಲಿ 'ರೋಗ'ಕ್ಕೆ ಔಷಧ ಕೊಡುವುದಕ್ಕಿಂತ ಹೆಚ್ಚು ರೋಗಿಗೆ 'ಚಿಕಿತ್ಸೆ' ನೀಡಬೇಕು ಎಂಬ ಧೋರಣೆ ಇತ್ತು. ನನ್ನಲ್ಲಿ ಬಂದ ರೋಗಿಗಳ ಪೂರ್ವಾಪರ ವಿಚಾರಿಸಿ, ರೋಗದ ಬಗ್ಗೆ ಅವರಲ್ಲಿ ಇದ್ದ ಭಯ ಮತ್ತು ಭ್ರಮೆಯನ್ನು ಹೋಗಲಾಡಿಸಿ ಚಿಕಿತ್ಸೆ ನೀಡುವುದೇ ನನಗೆ ಮುಖ್ಯವಾಗಿತ್ತು. ಆದರೆ, ಎಲ್ಲರೂ ಇದಕ್ಕೆ ಒಗ್ಗಿಕೊಳ್ಳುತ್ತಿದ್ದಿಲ್ಲ. ನಮ್ಮ ಬಗ್ಗೆ ಅನವಶ್ಯಕ ಪ್ರಶ್ನೆ ಕೇಳುತ್ತಾರೆ, ಇಂಜೆಕ್ಷನ್ ಚುಚ್ಚಿ ಅಂದರೂ ಚುಚ್ಚುವುದಿಲ್ಲ, 'ಇದು ತನ್ನಿಂದಾಗದು ಇಂಥ ಕಡೆ ಹೋಗಿ' ಎಂದು ನಿರ್ದೇಶನ ನೀಡುತ್ತಾರೆ, ಇತ್ಯಾದಿ ಕಾರಣಗಳಿಂದ ನಾನು ಜನಮನ್ನಣೆ ಪಡೆಯಲಿಲ್ಲ, ಸಂಪಾದನೆಯನ್ನೂ ಮಾಡಲಿಲ್ಲ. ಹಾಗೆ ನನ್ನ 'ಚಿಕಿತ್ಸೆ' ಇದ್ದದ್ದು ಮಾತಿನಲ್ಲಿ, ಔಷಧಿಗಳಲ್ಲಿ ಅಲ್ಲ.

ಆದರೆ, ಈ 'ಮಾತು' ನನ್ನ ಸಂಘಟನೆಗೆ ಬೆಂಬಲ ನೀಡಿದ್ದು ಆಶ್ಚರ್ಯ. ಯಾಕೆಂದರೆ ನನ್ನ ಮಾತುಗಳು ಜನರ ಪಾಲಿಗೆ ಆಕರ್ಷಕವಾಗಿದ್ದುವೋ ಏನೋ ಗೊತ್ತಿಲ್ಲ. ನಾನು ಸಂಘಟನೆಗೆ ಸಂಬಂಧಿಸಿದ ಹಾಗೆ ನೆರವು ಕೇಳಿದಾಗ 'ಇಲ್ಲ' ಎಂದವರೇ ಇಲ್ಲ! 2008ನೇ ಇಸವಿಯಿಂದ 2016ನೇ ಇಸವಿ ತನಕ ಮೂಡುಬಿದಿರೆಯ ಸಿ.ಕೆ. ಪಡಿವಾಳ್ ಎಂಬ ಸದ್ಗೃಹಸ್ಥ ಹೋಟೆಲ್ ಉದ್ಯಮಿಯೊಬ್ಬರು 'ಕಾಂತಾವರ ಕನ್ನಡ ಸಂಘ'ಕ್ಕೆ ವರುಷಕ್ಕೊಂದು ಲಕ್ಷ ರೂಪಾಯಿಗಳನ್ನು ನೀಡುತ್ತಾ ಬಂದಿದ್ದಾರೆ. ಆಮೇಲೆ ಪಡಿವಾಳರು ಅಸ್ವಸ್ಥರಾಗಿ ಎರಡು ವರುಷದ ಮೇಲೆ ನಿಧನರಾದರು. ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆಯವರು 'ವರ್ಧಮಾನ ಪ್ರಶಸ್ತಿ ಪೀಠ'ಕ್ಕಲ್ಲದೆ ಕಾಂತಾವರ ಕನ್ನಡ ಸಂಘಕ್ಕೂ ಈಗಲೂ ದೊಡ್ಡ ಮೊತ್ತದ ನೆರವು ನೀಡುತ್ತಿದ್ದಾರೆ. ದಿ. ಕುಲ್ಯಾಡಿ ಮಾಧವ ಪೈ, ಧರ್ಮದರ್ಶಿ ಹರಿಕೃಷ್ಣ ಪುನರೂರು ಇವರೆಲ್ಲ ನನ್ನನ್ನು 'ಇವ ನಮ್ಮವ' ಎಂಬಂತೆ ನೋಡಿಕೊಂಡಿದ್ದಾರೆ. ಜನಸಾಮಾನ್ಯರ ಸ್ಪಂದನವೂ ಸಿಕ್ಕಿದೆ.

**◆ ಏಕಾಂತ ಕ್ರಿಯೆಯಾದ ಸೃಜನಶೀಲತೆಯನ್ನೂ, ಲೋಕಾಂತ ಚಟುವಟಿಕೆಯಾದ ಸಂಘಟನೆಯನ್ನೂ ಪರಸ್ಪರ ಪೂರಕವಾಗಿ ದುಡಿಸಿಕೊಂಡಿದ್ದೀರಿ. ಸಮಯ ಮತ್ತು ಪ್ರತಿಭೆಗಳ ನಿರ್ವಹಣೆಯ ದೃಷ್ಟಿಯಿಂದ ಕಷ್ಟಸಾಧ್ಯವೆನಿಸುವ**